ಶ್ರೀ ಪಿ. ಬಸವರಾಜ್ : ಅಧ್ಯಕ್ಷರೇ ರಾಜ್ಯದ ಗ್ರಾಮಾಂತರ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿರುವ ವೈದ್ಯಾಧಿಕಾರಿಗಳ ಕೊರತೆ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ತುಂಬಲಿಕ್ಕೆ ಒಂದು ಟೈಂಲಿಮಿಟ್ ಇಟ್ಟು ತುಂಬಿದರೆ ಪ್ರಯೋಜನವಾಗುತ್ತದೆ. ಯಾವಾಗ ತುಂಬುತ್ತೀರಿ? ಕಳೆದ ಒಂದು ವರ್ಷದಿಂದಲೂ ಆ ಹುದ್ದೆ ಖಾಲಿ ಇದ್ದು, ಆಸ್ಪತ್ರೆ ಇದ್ದು ವೈದ್ಯರು ಇಲ್ಲದೇ ಇರುವುದರಿಂದ ಯಾವಾಗ ತುಂಬುತ್ತೀರಿ?

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಈಗಾಗಲೇ ನಮ್ಮ ನಮ್ಮ ಇಲಾಖೆಯಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವ ಸಲುವಾಗಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. 1992 ಅಕ್ಟೋಬರ್ನಲ್ಲಿ 380, ಹಾಗೂ 93ರಲ್ಲಿ 374 ಈ ತರಹ 774 ವೈದ್ಯರನ್ನು ನಾವು ತುಂಬಿಕೊಂಡಿದ್ದು ಬಹಳಷ್ಟು ಕಡೆ ವೈದ್ಯರನ್ನು ತುಂಬಲಾಗಿದೆ. ಈಗ ಗ್ರಾಮಾಂತರ ಪ್ರದೇಶದಲ್ಲಿ 336 ಹಾಗೂ ಪಟ್ಟಣ ಪ್ರದೇಶದಲ್ಲಿ 105 ಹುದ್ದೆಗಳು ಮಾತ್ರ ನಮ್ಮಲ್ಲಿ ಖಾಲಿ ಇದ್ದು ಈಗಾಗಲೇ ಅವುಗಳನ್ನು ಭರ್ತಿ ಮಾಡುವ ಸಲುವಾಗಿ ಅರ್ಜಿಗಳನ್ನು ಕರೆದಿದ್ದೇವೆ. ಅತಿ ಹೆಚ್ಚು ಎಂದರೆ ಒಂದೂವರೆ ತಿಂಗಳಲ್ಲಿ ಆ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಬಸವರಾಜ್ : ನನ್ನ ಮತದಾರ ಕ್ಷೇತ್ರದ ಸಾಲಿಗ್ರಾಮ ಸಾಸ್ತಾನ್ನಲ್ಲಿ ಖಾಲಿಯಾಗಿ ಒಂದು ವರ್ಷವಾಯಿತು, ಅದನ್ನು ಕೂಡಲೇ ತುಂಬಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಹಿಂದೆ ಇದೇ ಸದನದಲ್ಲಿ ನಾನು ಹೇಳಿದ್ದೇನೆ. ಇನ್ನು ಒಂದೂವರೆ ತಿಂಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವಾವ ಮೂಲೆಯಲ್ಲಿ ಹೋದರೂ ಕೂಡ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯ ಅಥವಾ ಪುರುಷವೈದ್ಯರಾಗಲಿ ಖಾಲಿ ಇಲ್ಲವೆಂಬ ರೀತಿ ಸರ್ಕಾರ ಭರ್ತಿ ಮಾಡುವ ಸಲುವಾಗಿ ಕಾರ್ಯಕ್ರಮ ಹಾಕಿಕೊಂಡಿದೆ. ಅದನ್ನು ತುಂಬುವ ವ್ಯವಸ್ಥೆ ಕೂಡ ಮಾಡಲಾಗುವುದು.

ಶಿವಮೊಗ್ಗ ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳು.

222 - ಡಿ.ಬಿ. ಗಂಗಪ್ಪ (ಹೊನ್ನಳ್ಳಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಆ) ಹಾಗಿದ್ದಲ್ಲಿ ಅವುಗಳನ್ನು ಯಾವ ಯಾವ ತಾಲ್ಲೂಕಿನಲ್ಲಿ ತೆರೆಯಲಾಗಿದೆ.

ಇ) ಹೊನ್ನಾಳಿ ತಾಲ್ಲೂಕಿನ ಕೊಟೆ ಮಲ್ಲೂರು ಮತ್ತು ಕಂಚಿಕೊಪ್ಪಗಳಲ್ಲಿ ಆರೋಗ್ಯ ಕೇಂದ್ರಗಳನ್ನು ತೆರೆಯಲು ಸರ್ಕಾರ ಕೈಗೊಂಡಿದೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 90-91ನೇ ಸಾಲಿನಿಂದ ಶಿವಮೊಗ್ಗ ಜಿಲ್ಲೆಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ ಕೆಳಗಿನಂತಿವೆ.

90-91	91-92	92-93	ವಿ93-94
1	3	4	2

ಆ) ಶಿವಮೊಗ್ಗ ಕೆಳಕಂಡ ಸ್ಥಳಗಳಿಗೆ 90-91ನೇ ಸಾಲಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

90-91		91-92	
ತಾಲ್ಲೂಕು	ಸ್ಥಳ	ತಾಲ್ಲೂಕು	ಸ್ಥಳ
1. ಶಿಕಾರಿಪುರ	ಚಿಕ್ಕ ಜಂಬೂರು	1. ಸಾಗರ	ಕಾರ್ಗಲ್
		2. ಸೊರಬ	ಶಕುನಹಳ್ಳಿ
		3. ಸೊರಬ	ಎಣ್ಣೆಕೊಪ್ಪ

92-93		93-94	
ತಾಲ್ಲೂಕು	ಸ್ಥಳ	ತಾಲ್ಲೂಕು	ಸ್ಥಳ
1. ಸೊರಬ	ಓಟೂರು	1. ಶಿಕಾರಿಪುರ	ತೇಗರ್ಸಿ
2. ಸೊರಬ	ಹುಲತ್ತಿ ಕೊಪ್ಪ	2. ಚನ್ನಗಿರಿ	ಪಂಡೋಮಟ್ಟಿ
3. ಹೊಸನಗರ	ಹುಂಚ		
4. ಸಾಗರ	ಸಿರುವಂತೆ.		

ಇ) ಇಲ್ಲ.

ಶ್ರೀ ಡಿ.ಬಿ. ಗಂಗಪ್ಪ: ಅಧ್ಯಕ್ಷರೇ, ಕಳೆದ 4 ವರ್ಷದಲ್ಲಿ ಶಿವಮೊಗ್ಗದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಕೇಳಿದ್ದಕ್ಕೆ ಸುಮಾರು 10 ಎಂದು ಉತ್ತರ ಕೊಟ್ಟಿದ್ದಾರೆ. 90-91ರಲ್ಲಿ 1, 91-92ರಲ್ಲಿ 3, 92-93ರಲ್ಲಿ 4, 93-94ರಲ್ಲಿ 2 ಎಂದು ಕೊಟ್ಟಿದ್ದಾರೆ ಅದೇ ರೀತಿ ಸ್ಥಳಗಳನ್ನು ಸಹ ಕೊಟ್ಟಿದ್ದಾರೆ. ಆದರೆ ಹೊನ್ನಾಳಿ ತಾಲೂಕಿನ ಕೋಟೆಮಲ್ಲೂರು ಮತ್ತು ಕೆಂಚಕೊಪ್ಪದಲ್ಲಿ ಪ್ರಾಥಮಿಕ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರದ ಕಾರ್ಯಕ್ರಮ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಬೇಕಾದರೆ ಜಿಲ್ಲೆಯನ್ನು ಯೂನಿಟ್ ಆಗಿ ತೆಗೆದುಕೊಳ್ಳುತ್ತೀರಾ, ತಾಲ್ಲೂಕನ್ನು ಯೂನಿಟ್ಟಾಗಿ ತೆಗೆದುಕೊಳ್ಳುತ್ತೀರಾ ಅಥವಾ ಜನಸಂಖ್ಯೆ ಆಧಾರದ ಮೇಲೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಪಾಟೀಲ್: ಅಧ್ಯಕ್ಷರೇ, ನಾವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಾಗ ಜಿಲ್ಲೆ ಹಾಗೂ ತಾಲ್ಲೂಕನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳುವುದಿಲ್ಲ. ಮೊದಲು 30 ಸಾವಿರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಮಾಡುವಂತಹ ನಮ್ಮ ಸರ್ಕಾರದ ಯೋಚನೆ ಇತ್ತು. ಈಗ ಜನರ ಬೇಡಿಕೆ ಆಧಾರದ ಮೇಲೆ 20 ಸಾವಿರ ಜನಸಂಖ್ಯೆಗೆ ಒಂದು ಕೇಂದ್ರವನ್ನು ಮಾಡಬೇಕೆಂಬುದು ಸರ್ಕಾರದ ಯೋಜನೆ.

ಶ್ರೀ ಡಿ.ಬಿ. ಗಂಗಪ್ಪ: ಅಧ್ಯಕ್ಷರೇ, ಆದರೆ ಕೆಂಚಕೊಪ್ಪ ಮತ್ತು ಕೋಟೆಮಲ್ಲೂರು ಪ್ರಾಥಮಿಕ ಕೇಂದ್ರ ಸ್ಥಾಪಿಸಬೇಕೆಂದು ಕೇಳಿ, ಕಳೆದ ನಾಲ್ಕು ವರ್ಷದಿಂದ ಸಂಬಂಧಪಟ್ಟ ಇಲಾಖೆ ಮುಖಾಂತರ ಬೇಕಾದ ಎಲ್ಲಾ ಮಾಹಿತಿ ಒದಗಿಸಿದರೂ ಅಲ್ಲಿ ಪ್ರಾರಂಭ ಮಾಡುತ್ತಿಲ್ಲ. ಅಲ್ಲಿನ ಜನರು 20-25 ಕಿಮೀ ವೈದ್ಯಕೀಯ ಸೇವೆ ಪಡೆಯಲು ಹೋಗಬೇಕಾಗುತ್ತದೆ. ಇದರಿಂದ ಕೆಲವರಿಗೆ ತೊಂದರೆಯಾಗುವುದರಿಂದ ಈ ವರ್ಷವಾದರೂ ಅಲ್ಲಿ ಪ್ರಾರಂಭ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ : ಅಧ್ಯಕ್ಷರೇ, ಕೋಟಿಮಲ್ಲೂರು ಹಾಗೂ ಕೆಂಚಕೊಪ್ಪಕ್ಕಿಂತ ಇನ್ನೂ ಹೆಚ್ಚಿನ ಅವಶ್ಯಕತೆ ಇದ್ದ ಗ್ರಾಮಗಳು ಆಭಾಗದಲ್ಲಿದ್ದುದರಿಂದ, ಇದನ್ನು ಈ ಸಲ ಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮುಂದಿನ ಸಲ ಸರ್ಕಾರ ತಮ್ಮ ಬೇಡಿಕೆಯನ್ನು ಪರಿಶೀಲಿಸುವುದು.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಕೌಜಲಗಿಯವರದ್ದು; ಇದಕ್ಕೆ ಸರ್ಕಾರ ಸ್ವಲ್ಪ ಟೈಂ ಕೇಳಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಕೇಳಿದ್ದುದು ಬೆಳಗಾಂ ಜಿಲ್ಲೆಯಲ್ಲಿ ನೀವು ಫಾರಸ್ಟ್‌ಗಾಗಿ ಎಷ್ಟು ಖರ್ಚುಮಾಡಿದ್ದೀರಿ ಎಂದು; ಇಡೀ ರಾಜ್ಯದ್ದೇನೂ ಕೇಳಿರಲಿಲ್ಲ. ದಯವಿಟ್ಟು ನಾಳೆ ತೆಗೆದುಕೊಳ್ಳಿ.

ಪ್ರಾಥಮಿಕ ಶಾಲೆಗಳಿಗೆ ವಂತಿಗೆಯ ಮೂಲಕ ಪ್ರವೇಶಾತಿ ರದ್ದು

273 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ವಂತಿಗೆಯನ್ನು ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಬೆಂಗಳೂರು ನಗರದಲ್ಲಿ ಪ್ರಾಥಮಿಕ ಶಾಲೆಗಳಿಗೆ ಪ್ರವೇಶಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಪೂರ್ವ ಪ್ರಾಥಮಿಕ ಶಿಕ್ಷಣದಿಂದ, ಪ್ರಾರಂಭಿಸಿ ಹನ್ನೆರಡನೇ ತರಗತಿವರೆಗೆ ಶುಲ್ಕ ಸ್ವರೂಪದ ಬಗ್ಗೆ ನಿಗದಿಪಡಿಸಲು ಅಧಿಕಾರಿಗಳ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ವರದಿಯ ಮೇಲೆ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಆ) ಹೌದು.

ಇ) ಈ ಬಗ್ಗೆ ನೇಮಿಸಿರುವ ಸಮಿತಿಯು ಸಲ್ಲಿಸುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಕ್ಯಾಪಿಟೇಷನ್ ಶುಲ್ಕ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜಿಗಿಂತ ಹೆಚ್ಚಾಗಿ ಅದರಲ್ಲೂ ಬೆಂಗಳೂರಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭವಾಗಿರತಕ್ಕಂಥಾದ್ದು ಶಾಲೆಗಳು 94-95ರ ಜೂನ್ನಲ್ಲಿ ಪ್ರಾರಂಭವಾದರೂ, ಫೆಬ್ರವರಿಯಲ್ಲೇ ಇಂಟರ್ವ್ಯೂಗೆ ಕರೆಯುತ್ತಿದ್ದಾರೆ. ಕೆಲವು ಶಾಲೆಗಳು ಶಾಲೆಗಳ ಫಾಲ್ಸ್ ಸ್ಟ್ಯಾಂಡರ್ಡ್ ಮೇಲೆ 15-25 ರಿಂದ 50 ಸಾವಿರದವರೆಗೆ ಫಿಕ್ಸ್ ಮಾಡಿಕೊಂಡಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೇ? ಅನುದಾನ ತೆಗೆದುಕೊಂಡಿರತಕ್ಕಂತಹ ಸಂಸ್ಥೆಗಳಲ್ಲಿ ಇದನ್ನು ನಿಲ್ಲಿಸಲಿಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ? ಮತ್ತು ಸಮಿತಿಯು ಯಾವಾಗ ತನ್ನ ವರದಿ ಕೊಡುತ್ತದೆ ಎಂಬುದನ್ನು ಖಚಿತವಾಗಿ ಸಚಿವರು ಹೇಳಬೇಕು. ಈ ಸರಕಾರದ ಒಂದು ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ. ಇಂಜಿನಿಯರಿಂಗ್ ಮೆಡಿಕಲ್ ಕಾಲೇಜಿನ ವಿಚಾರದಲ್ಲಿ ಸುಪ್ರೀಂಕೋರ್ಟಿನವರು ಒಂದು ಆದೇಶ ಕೊಟ್ಟ ಮೇಲೆ ಅದರ ಪ್ರಕಾರ ನಡೆದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಯವರು ಪ್ರಾಮಾಣಿಕ ಪ್ರಯತ್ನ ಮಾಡಿರುವುದೂ ನಿಜ ಮತ್ತು ಸ್ವಲ್ಪ ಫಲ ಸಿಕ್ಕಿರುವುದೂ ನಿಜ. ತಾವು ದಯವಿಟ್ಟು ಇದನ್ನೂ ಕೂಡ ಇದೇ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕದಿಂದ ಹಿಡಿದು 10ನೇ ತರಗತಿಯವರೆಗೆ ಉಚಿತ